೧	೨	೩	೪	೫
೧೯	ಮಡಿಕೇರಿ ಜಿಲ್ಲೆ.			
೧	ಸೋಮವಾರಪೇಟೆ	೫೧	೧೨	೬೩
೨	ವೀರಾಜಪೇಟೆ	೯೬	೫೮	೧೫೪
೩	ಮಡಿಕೇರಿ	೪೦	೧	೪೧
	ಒಟ್ಟು	೧೮೭	೭೧	೨೫೮

ಶ್ರೀಮತಿ ಸಂಪೂವಸಂತ.—ಮಾನ್ಯ ಅಧ್ಯಕ್ಷರೇ, ಮಹಿಳಾ ಮಂಡಲಗಳಿಗೆ ನೆರವು ಕೊಡುವುದಕ್ಕೆ ಸರ್ಕಾರದವರು ಏನೇನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ಸರ್ಕಾರದ ನೆರವೇನೂ ಇಲ್ಲ. ಸೋಷಿಯಲ್ ವೇಲ್‌ಫೇರ್ ಬೋರ್ಡ್‌ನಿಂದ ಸಹಾಯ ಮಾಡುತ್ತೇವೆ.

ಶ್ರೀಮತಿ ಸುಮಾವಸಂತ.—ಈ ಮಹಿಳಾಮಂಡಲಗಳನ್ನು ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ಸಲ್ಲಿಸಿರುವ ಒಟ್ಟು ೧೫೦ ಅರ್ಜಿಗಳು ಪೆಂಡಿಂಗ್ ಇವೆ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರಲ್ಲಿ ಸಹ ಪ್ರಾರ್ಥನೆ ಮಾಡಲಾಗಿದೆ, ಆದ್ದರಿಂದ ಈ ಮಹಿಳಾಮಂಡಲಗಳಿಗೆ ಕೊಡುವ ಒಂದು ಸಾವಿರ ರೂಪಾಯಿಗಳ ಗ್ರಾಂಟನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ ?

ಶ್ರೀ ಜಿ. ಬಸವಣ್ಣಪ್ಪ.—ನನ್ನ ಗಮನಕ್ಕೆ ಈಗತಾನೆ ಈ ವಿಷಯ ಬಂದಿದೆ. ನಾನು ಈ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ನೊಂದಣಿಯಾಗದೆ ಇರುವಂತಹ ಮಹಿಳಾಮಂಡಲಗಳನ್ನು ಏನು ಮಾಡುತ್ತೀರಿ ?

ಶ್ರೀ ಜಿ. ಬಸವಣ್ಣಪ್ಪ.—ಈಗಾಗಲೇ ನೊಂದಣಿ ಮಾಡಿದ್ದೇವೆ.

ಅಧ್ಯಕ್ಷರು.—ಶ್ರೀ ಪ್ರಭಾಕರ್ ರಾಣೆಯವರು ಅಬ್ಸೆಂಟ್.

ಒಂದನೇ ವಟ್ಟಿಯಿಂದ ಮುಂದೂಡಲಾದ ಪ್ರಶ್ನೆಗಳು

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಅಧಿಕಾರಿಗಳು ಸರಿಯಾದ ವರದಿಯನ್ನು ಕೊಟ್ಟಿರುವುದಿಲ್ಲವೆಂದು ನಾನು ಭಾವಿಸುತ್ತೇನೆ. ಮೊದಲನೆಯದಾಗಿ ಕೇಳುವುದೇನೆಂದರೆ, ಆನಂದಗಿರಿ ಬೆಟ್ಟ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇನ್ನು ಎರಡನೆಯದಾಗಿ ಈಗಾಗಲೇ ಅಲ್ಲಿ ಕಟ್ಟಿರುವ ಗುಡಿಸಲುಗಳನ್ನು ಸರ್ಕಾರ ಒಪ್ಪುತ್ತದೆಯೇ ಎಂಬುದನ್ನು ತಿಳಿಸಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಪ್ರಸ್ತುತ ಆಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಮುಂದೆ ಈ ರೀತಿಯ ಅನಧಿಕೃತ ಗುಡಿಸಲುಗಳು ಬರದ ರೀತಿಯಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಆನಂದಗಿರಿ ಬೆಟ್ಟದ ಮೇಲೆ ಸರಿ ಮಾಡುವುದು ಒಂದು ವಿಷಯ. ಇದೇ ಜಾಗದಲ್ಲಿ ಪರಿಜನಗಿರಿಜನರಿಗೆ ವಿಾಸಲಾಗಿದಲಾಗಿತ್ತು. ಸೈಟ್ ಇಲ್ಲದವರಿಗೆ ಸೈಟು ಕೊಡಬೇಕೆಂದು ಮಾಡಲಾಗಿತ್ತು. ಆದರೆ, ಅದೇ ಜಾಗದಲ್ಲಿ ಬೇರೆಯವರು ತಿತಿಕ್ರಮಣ ಮಾಡಿದ್ದಾರೆ. ಇದುವರೆಗೂ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ತಿಳಿಸಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಮತ್ತು ಸುತ್ತಮುತ್ತಲಿರುವ ಸರ್ಕಾರಿ ಜಾಗಗಳಲ್ಲಿ ಗುಡಿಸಲುಗಳನ್ನು ಹಾಕತಕ್ಕಂಥ ಕೆಲಸ ಹಲವಾರು ವರ್ಷಗಳಿಂದ ನಡೆದು

ಕೊಂಡು ಬಂದಿದೆ. ಇಂಥ ಕೊಳಚೆ ಪ್ರದೇಶಗಳನ್ನು ತೆಗೆಸುವುದಕ್ಕೆ ಹೋದರೆ ಗುಡಿಸಲುಗಳನ್ನು ತೆಗೆಯಬಾರದೆಂದು ವಿರೋಧ ಮಾಡುತ್ತಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಈ ಕೆಲಸ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಶಾಮೀಲಾಗಿರುತ್ತಾರೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಅಧಿಕಾರಿಗಳು ಶಾಮೀಲಾಗಿರುತ್ತಾರೆ, ರಾಜಕಾರಣಿಗಳು ಶಾಮೀಲಾಗಿರುತ್ತಾರೆ. ಕೆಲವು ಕಡೆ ಗುಡಿಸಲುಗಳನ್ನು ಕೀಳುವುದಕ್ಕೆ ಹೋದಾಗ ಶಾಸಕರುಗಳೇ ಬಂದು ಅಲ್ಲಿ ಗುಡಿಸಲುಗಳನ್ನು ಕೀಳಿಸಬಾರದೆಂದು ಒತ್ತಾಯ ಮಾಡುತ್ತಾರೆ. ಈ ರೀತಿ ಅತಿಕ್ರಮವಾಗಿ ಕಟ್ಟುವ ಗುಡಿಸಲುಗಳನ್ನು ಕಿತ್ತು ಹಾಕುವುದಕ್ಕೆ ಸಾರ್ವಜನಿಕರ ಮತ್ತು ಶಾಸಕರ ಸಹಕಾರಗಳು ಬೇಕಾಗುತ್ತವೆ.

ಅಧ್ಯಕ್ಷರು.—ಶ್ರೀ ಎಂ. ರೇವಣಸಿದ್ದಯ್ಯನವರು ಆಬ್ಸೆಂಟ್.

ಶ್ರೀ ಗೋಪಾಲ ಮಂಕುಂದ ಕಾನಡೆಯವರು, ಆಬ್ಸೆಂಟ್. ಶ್ರೀ ಬಿ. ಲಕ್ಕಪ್ಪನವರು.

ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ ೧೧೦(೨೧೫)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ತುಂಡು ಭೂಮಿ ಕಾಯಿದೆಯನ್ನು ರಾಜ್ಯದಲ್ಲಿ ವಿಕರೂಪದಲ್ಲಿ ಜಾರಿಗೆ ತರುತ್ತಿದ್ದೇವೆಂದು ಹೇಳಿದ್ದಾರೆ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವಿಕರೂಪದ ತುಂಡು ಭೂಮಿ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡಿಲ್ಲ ಈಗ ತುಂಡು ಭೂಮಿ ಕಾಯಿದೆ ಜಾರಿಗೆ ತಂದಿರುವುದರಿಂದ ಭೂಮಿಯನ್ನು ಬೇರೆಯವರಿಗೆ ರಿಜಿಸ್ಟರ್ ಮಾಡಂವುದಕ್ಕೇ ಆಗುತ್ತಿಲ್ಲ. ಜೊತೆಗೆ ಅಣ್ಣ ತಮ್ಮಂದಿರು ಸಹ ಪಾಲು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಇದರಿಂದ ಮೂಲಭೂತವಾದ ಹಕ್ಕಿಗೆ ವಿರೋಧವಾಗುತ್ತದೆ. ಆಮೇಲೆ ಇದು ಪರಿಶೀಲನೆಯಲ್ಲಿ ಇದೆಯೆಂದು ಹೇಳಿದ್ದೀರಿ. ಪರಿಶೀಲನೆ ಎಷ್ಟು ವರ್ಷಗಳಿಂದ ಇದೆ ? ಪರಿಶೀಲನೆ ಯಾವಾಗ ಮುಗಿದು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮೊದಲನೆಯದಾಗಿ ಈ ಕಾನೂನು ರಾಜ್ಯಾಂಗ ಬದ್ಧವಾಗಿದೆ ಕೋರ್ಟಿನಲ್ಲಿಯೂ ಕೂಡ ಈ ಬಗ್ಗೆ ನಿರ್ಣಯಗಳು ಆಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದು ವಿಶೇಷವಾದಂತಹ ಪರಿಸ್ಥಿತಿ ಇದೆ. ಅಲ್ಲಿರತಕ್ಕಂಥ ಸಣ್ಣ ಸಣ್ಣ ಜಮೀನುಗಳಲ್ಲಿ ಮನೆಗಳು ಇವೆ. ಅವುಗಳಲ್ಲಿಯೇ ೧೦-೨೦ ತೆಂಗಿನ ಗಿಡಗಳನ್ನು ಕೂಡ ಬೆಳೆಸಿಕೊಂಡಿದ್ದಾರೆ ಈ ತರಹದ ಒಂದು ಪರಿಸ್ಥಿತಿ ಅಲ್ಲಿ ಸಾಮಾನ್ಯವಾಗಿದೆ. ವಿಶೇಷವಾಗಿ ಅವರಿಗೆ ವಿನಾಯಿತಿ ಕೊಡುವುದಕ್ಕೆ ಮತ್ತು ವಿಭಾಗ ಮಾಡಿಕೊಳ್ಳುವುದಕ್ಕೆ ತೊಂದರೆ ಇದೆ. ವಿಭಾಗ ಮಾಡಿಕೊಳ್ಳುವಾಗ ಕಾನೂನು ಪ್ರಕಾರ ಪರವಾನಿಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಎರಡು ಅಭಿಪ್ರಾಯಗಳು ಇವೆ ತುಂಡು ಕಾಯಿದೆ ಜಾರಿಯಲ್ಲಿರುವುದರಿಂದ ಅದೂ ಒಳ್ಳೆಯದು ಎಂಬ ಅಭಿಪ್ರಾಯವೂ ಇದೆ ಮುಂಬಯಿ ಕರ್ನಾಟಕದಲ್ಲಿ ಇದು ಈಗಾಗಲೇ ಮುಗಿದು ಹೋಗಿದೆ. ಈ ಬಗ್ಗೆ ಅಗ್ರಿಕಲ್ಚರ್ ಯೂನಿವರ್ಸಿಟಿಯವರಿಗೆ ಅಭಿಪ್ರಾಯಗಳನ್ನು ಕೇಳಿ ಪತ್ರ ಬರೆದಿದ್ದೇವೆ, ಅಲ್ಲಿಂದ ತಜ್ಞರ ಅಭಿಪ್ರಾಯ ಬಂದ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ .

ಅಧ್ಯಕ್ಷರು.—ಪ್ರಶ್ನೆ ಮುಗಿದಿದೆ. ಮುಂದಿನ ಪ್ರಶ್ನೆ...

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ದಯವಿಟ್ಟು ಕೇಳಬೇಕು. ಇದರಿಂದ ಸಣ್ಣ ಹಿಡುವಳಿದಾರರುಗಳನ್ನು ನಿರುದ್ಯೋಗಿಗಳನ್ನಾಗಿ ಮಾಡಿದ ಹಾಗೆ ಆಗುತ್ತದೆ. ಈ ಕಾಯಿದೆಯಿಂದಾಗಿ ೨೦ ಗುಂಟೆ ಜಾಗ ಇರುವವರು ಇತರ ಸಣ್ಣ ಸಣ್ಣ ಹಿಡುವಳಿದಾರರು ಬಿಟ್ಟುಕೊಡಬೇಕಾಗುತ್ತದೆ. ಆದುದರಿಂದ ಅವರಿಗೆ ಭಾರಿ ಅನ್ಯಾಯವಾಗಿ ಅವರು ತೊಂದರೆಗೆ ಒಳಗಾಗುತ್ತಾರೆ ಮತ್ತು ತಮ್ಮ ಹೊಟ್ಟೆ ಪಾಡಿಗಾಗಿ ಇದ್ದು ದರಲ್ಲಿಯೇ ಜೀವನ ನಿರ್ವಣೆಗಾಗಿ ದುಡಿಯುತ್ತಿದ್ದ ಜನರು ನಿರುದ್ಯೋಗಿಗಳಾಗುತ್ತಾರೆ.